# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ).

ನಿಗಮ ಕಾರ್ಯಾಲಯ,
CIN : U40109KA2004SGC035177
ವಿಜಯನಗರ 2ನೇ ಹಂತ, ಹಿನಕಲ್, ಮೈಸೂರು–17.
Website : www.cescmysore.org

ಸಹಾಯಕಕಾರ್ಯನಿರ್ವಾಹಕಇಂಜಿನಿಯರ್(ವಿ), ರವರಕಛೇರಿ,
ಕಾರ್ಯ ಮತ್ತು ಪಾಲನೆ ಜ್ಯೋತಿನಗರ, ಉಪ–ವಿಭಾಗ,
ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ : 0821-2450020

ಕ್ರ.ಸಂ. : ಸ.ಕಾ.ನಿ.ಇಂ.(ವಿ)/ಸಲೆ/ಜ್ಯೋತಿನಗರ/19–20/ 483-85 ದಿನಾಂಕ : 30-4-19

## ಜನಸಂಪರ್ಕ ಸಭಾ ನಡಾವಳಿ

ದಿನಾಂಕ 27.04.2019 ರಂದು ಮಧ್ಯಾಹಃ 3.00 ಗಂಟೆಗೆ ಜ್ಯೋತಿನಗರ ಉಪವಿಭಾಗದಲ್ಲಿ ಶ್ರೀ.ಹೆಚ್.ಎಸ್.ಸ್ವಾಮಿ, ಕಾರ್ಯಪಾಲಕ ಇಂಜಿನಿಯರ್(ವಿ), ಕಾ&ಪಾ ವಿಭಾಗ, ನ.ರಾ.ಮೊಹಲ್ಲಾ, ಸೆಸ್ಕ್, ಮೈಸೂರು ರವರ ಅಧ್ಯಕ್ಷತೆಯಲ್ಲಿ ಗ್ರಾಹಕರ ಕುಂದು–ಕೊರತೆ ನಿವಾರಣೆ ಸಭೆ ನಡೆಸಲಾಯಿತು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ ಗ್ರಾಹಕರ ವಿವರ**

| ಕ್ರ.ಸಂ. | ಅಧಿಕಾರಿ/ನೌಕರನ ಹೆಸರು | ಪದನಾಮ | ಉಪವಿಭಾಗ/ ಶಾಖೆಯ ಹೆಸರು |
|---|---|---|---|
| 1 | ಶ್ರೀ ಹೆಚ್.ಎಸ್.ಸ್ವಾಮಿ, | ಕಾರ್ಯನಿರ್ವಾಹಕ ಇಂಜಿನಿಯರ್(ವಿ) | ಕಾ&ಪಾ ವಿಭಾಗ, ನ.ರಾ.ಮೊಹಲ್ಲಾ,ಮೈಸೂರು |
| 2 | ಶ್ರೀ ರಾಜು ಹೆಚ್.ಜಿ. | ಸ.ಕಾ.ನಿ.ಇಂ(ವಿ) | ಜ್ಯೋತಿನಗರ ಉಪವಿಭಾಗ |
| 3 | ಶ್ರೀ ಯಾಲಕ್ಕಯ್ಯ | ಪ್ರಭಾರ ಸ.ಲೆ.ಅ | ಜ್ಯೋತಿನಗರ ಉಪವಿಭಾಗ |
| 4 | ಶ್ರೀ ಜಮೀರ್ ಪಾಷ | ಸ.ಇಂ.(ತಾಂ) | ಜ್ಯೋತಿನಗರ ಉಪವಿಭಾಗ |
| 5 | ಶ್ರೀ ಕಿರಣ್ | ಸ.ಇಂ.(ವಿ) | ಜ್ಯೋತಿನಗರ ಶಾಖೆ |
| 6 | ಶ್ರೀ ಸ್ವಾಮಿ.ಸಿ | ಸ.ಇಂ.(ವಿ) | ಉದಯಗಿರಿ ಶಾಖೆ |
| 7 | ಶ್ರೀಮತಿ ಸುಮತಿ.ಆರ್ | ಸ.ಇಂ.(ವಿ) | ಶಾಂತಿನಗರ ಶಾಖೆ |
| 8 | ಶ್ರೀ ತಿಮ್ಮರಾಜು ಕೆ.ಟಿ | ಕಿ.ಇಂ.(ವಿ) | ಉದಯಗಿರಿ ಶಾಖೆ |
| 9 | ಶ್ರೀ ನಾಗಲಿಂಗು | ಕಿ.ಇಂ.(ವಿ) | ಜ್ಯೋತಿನಗರ ಶಾಖೆ |
| 10 | ಶ್ರೀ ಗುರುಮೂರ್ತಿ. ಎಸ್ | ಕಿ.ಇಂ.(ವಿ) | ಶಾಂತಿನಗರ ಶಾಖೆ |
| 11 | ಶ್ರೀ ಅಶ್ವತ್ಥನಾರಾಯಣ ಸಿ.ಆರ್ | – | ಗ್ರಾಹಕರು |
| 12 | ಶ್ರೀ ಮೊಹಮ್ಮದ್ ಅಲೀಮುಲ್ಲಾ ಖಾನ್ | – | ಗ್ರಾಹಕರು |
| 13 | ಶ್ರೀ ಕೆಂಚೇಗೌಡ | – | ಗ್ರಾಹಕರು |
| 14 | ಶ್ರೀ ಎಂ. ರಂಗಸ್ವಾಮಿ | – | ಗ್ರಾಹಕರು |

## ಸಭೆಯಲ್ಲಿ ಚರ್ಚಿಸಿದ ವಿಷಯಗಳು ಈ ಕೆಳಕಂಡಂತಿವೆ.

ಕಾರ್ಯಪಾಲಕ ಇಂಜಿನಿಯರ್(ವಿ), ಕಾ&ಪಾ ವಿಭಾಗ, ನ.ರಾ.ಮೊಹಲ್ಲಾ, ಸೆಸ್ಕ್, ಮೈಸೂರು ರವರು ಗ್ರಾಹಕರ ಕುಂದು-ಕೊರತೆ ನಿವಾರಣಾ ಸಭೆಗೆ ಎಲ್ಲರನ್ನೂ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು ಹಾಗೂ ಸಭೆಗೆ ಆಗಮಿಸಿದ ಗ್ರಾಹಕರುಗಳ ಮನವಿಗೆ ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಿದರು.

| | | | |
|---|---|---|---|
| 1 | ಶ್ರೀ ಕೆಂಚೇಗೌಡ<br>ಮೊ:9449123225 | ಸದರಿ ಗ್ರಾಹಕರ ಆರ್.ಆರ್.ಸಂಖ್ಯೆ :NREH 507 ನ ಮಾಪಕವು ಕಳೆದ ಒಂದೂವರೆ ತಿಂಗಳಿನಿಂದ ದೋಷಪೂರಿತವಾಗಿದ್ದು, ಸದರಿ ಮೀಟರ್‌ಅನ್ನು ಬದಲಾಯಿಸಿ ಕೊಡಬೇಕೆಂದು ಕೋರಿದರು. | ಕಾರ್ಯಪಾಲಕ ಇಂಜಿನಿಯರ್(ವಿ)ರವರು ಮಾತನಾಡಿ, ಜ್ಯೋತಿನಗರ ಘಟಕದ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 2 | ಶ್ರೀ ಮೊಹಮ್ಮದ್ ಅಲೀಮುಲ್ಲಾ ಖಾನ್<br>ಮೊ :9060427820 | a) ಶಾಂತಿನಗರದ ಮಹದೇವಪುರ ರಸ್ತೆಯಲ್ಲಿ ತಮ್ಮ ಹೆಸರಿನಲ್ಲಿ ಸುಮಾರು ಸ್ಥಾವರಗಳಿದ್ದು, ಅವುಗಳ ವಿದ್ಯುತ್‌ಸಂಪರ್ಕವೂ ತಮ್ಮ ಹೆಸರಿನಲ್ಲಿಯೇ ಇರುತ್ತದೆ. ಆದರೆ ಪ್ರಸ್ತುತ ಸದರಿಯವರ ಆಸ್ತಿಯನ್ನು ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಹಂಚಿಕೆ ಮಾಡಲಾಗಿದ್ದು, ಈಗಿರುವ ಕಾನೂನುಬದ್ಧ ಉತ್ತರಾಧಿಕಾರಿಗಳ ಹೆಸರಿಗೆ ವಿದ್ಯುತ್ ಸ್ಥಾವರದ ಖಾತೆಯನ್ನು ವರ್ಗಾವಣೆ ಮಾಡಿಕೊಡುವಂತೆ ಕೋರಿದರು.<br>b) ಶಾಂತಿನಗರದ ಮಹದೇವಪುರ ರಸ್ತೆಯ, ರಸ್ತೆ ಅಗಲೀಕರಣದ ಕಾಮಗಾರಿಯ ರೂಪುರೇಷೆಗಳು ತಯಾರಾಗುತ್ತಿದ್ದು, ಸದರಿ ರಸ್ತೆಯಲ್ಲಿ ನಮ್ಮ ಅನೇಕ ಕಟ್ಟಡಗಳಿವೆ, ಅದ್ದರಿಂದ ಒಂದು ವೇಳೆ ಮೈ.ನ.ಪಾಲಿಕೆಯಿಂದ ಸದರಿ ಕಟ್ಟಡಗಳನ್ನು ತೆರವುಗೊಳಿಸುವ ಮುಂಚಿತವಾಗಿ ನಿಮ್ಮ ಇಲಾಖೆಯ ವತಿಯಿಂದ ವಿದ್ಯುತ್‌ಸಂಪರ್ಕ ಕಡಿತಗೊಳಿಸುವ ಬಗ್ಗೆ ಮುನ್ಸೂಚನೆ ಅಥವಾ ನೋಟೀಸ್ ನೀಡಲು ಸಾಧ್ಯವೇ ಎಂದು ಕೋರಿದರು. | a) ಕಾರ್ಯಪಾಲಕ ಇಂಜಿನಿಯರ್(ವಿ)ರವರು ಮಾತನಾಡಿ, ಮಾಲೀಕರು ಕಂದಾಯ ಪ್ರದೇಶದ ತಮ್ಮ ಕಟ್ಟಡವನ್ನು ಅನ್ಯ ವ್ಯಕ್ತಿಗೆ ಮಾರಾಟ ಮಾಡಿದರೆ ಅಂತಹ ಕಟ್ಟಡದ ವಿದ್ಯುತ್ ಸಂಪರ್ಕದ ಖಾತೆಯನ್ನು ವರ್ಗಾವಣೆ ಮಾಡಲು ಅವಕಾಶವಿಲ್ಲವೆಂದೂ ಹಾಗೂ ಒಂದು ವೇಳೆ ಆಸ್ತಿಯು ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಹಂಚಿಕೆಯಾಗಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಪೂರಕ ದಾಖಲೆಗಳನ್ನು ಒದಗಿಸಿದರೆ ವಿದ್ಯುತ್ ಖಾತೆಯನ್ನು ವರ್ಗಾವಣೆ ಮಾಡಿಕೊಡಲಾಗುವುದೆಂದು ತಿಳಿಸಿದರು.<br>b) ಕಾರ್ಯಪಾಲಕ ಇಂಜಿನಿಯರ್(ವಿ) ರವರು ಮಾತನಾಡಿ, ಮೈ.ನ.ಪಾಲಿಕೆ ಯಿಂದ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವ ಸಂದರ್ಭದಲ್ಲಿ ಮಾತ್ರ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವ ವಿಚಾರವನ್ನು ಮೈ.ನ.ಪಾಲಿಕೆಯವರು ನಮ್ಮ ಇಲಾಖೆಗೆ ತಿಳಿಸುವುದರಿಂದ ಯಾವುದೇ ರೀತಿಯ ಮುನ್ಸೂಚನೆಯನ್ನು ಗ್ರಾಹಕರಿಗೆ ನೀಡಲು ಸಾಧ್ಯವಿಲ್ಲವೆಂದೂ ಹಾಗೂ ಸದರಿ ಕಟ್ಟಡದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದ ನಂತರ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿರುವ ಬಗ್ಗೆ ಗ್ರಾಹಕರಿಗೆ ತಿಳಿಸಲಾಗುವುದೆಂದು ತಿಳಿಸಿದರು. |

ಸಭೆಯಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಸಭಾಧ್ಯಕ್ಷರು ವಂದನೆಯನ್ನು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
ಜ್ಯೋತಿನಗರ, ಮೈಸೂರು

ಪ್ರತಿಯನ್ನು .

1. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಮೈಸೂರು ರವರ ಅವಗಾಹನೆಗೆ ಸಲ್ಲಿಸಲಾಗಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನ.ರಾ.ಮೊಹಲ್ಲಾ ವಿಭಾಗ, ಚಾ.ವಿ.ಸ.ನಿ.ನಿ., ಮೈಸೂರುರವರ ಅವಗಾಹನೆಗೆ ಸಲ್ಲಿಸಲಾಗಿದೆ.
3. ಸಹಾಯಕ ಇಂಜಿನಿಯರ್(ವಿ), ಜ್ಯೋತಿನಗರ/ ಶಾಂತಿನಗರ/ ಉದಯಗಿರಿ.
4. ಸಲೇಅ/ ಕಡತ.